ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಯರಗೇರಾ–584133, ರಾಯಚೂರು, ಕರ್ನಾಟಕ ರಾಜ್ಯ, ಭಾರತ

Office No. +91 9141030953 ಪರೀಕ್ಷಾ ವಿಭಾಗ E-mail: registrarevrur@gmail.com

ಸಂಖ್ಯೆ: ರಾವಿರಾ/ಪರೀಕ್ಷಾ/2022–23/117 ದಿನಾಂಕ: 08.09.2022

# ಪರೀಷ್ಕೃತ ಪರೀಕ್ಷಾ ಅಧಿಸೂಚನೆ

ವಿಷಯ: 2021–22 ನೇ ಸಾಲಿನ ಸ್ನಾತಕ(UG) ದ್ವಿತೀಯ ಸೆಮಿಸ್ಟರ್ (ಎನ್.ಇ.ಪಿ) ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 16.08.2022

*****

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಸೆಪ್ಟೆಂಬರ್/ಅಕ್ಟೋಬರ್–2022 ರಲ್ಲಿ ಜರುಗಲಿರುವ ಬಿ.ಎ., ಬಿ.ಎಸ್ಸಿ., ಬಿ.ಕಾಂ., ಬಿ.ಬಿ.ಎ., ಹಾಗೂ ಬಿ.ಸಿ.ಎ., ದ್ವಿತೀಯ ಸೆಮಿಸ್ಟರ್ ಪರೀಕ್ಷೆಗಳಿಗೆ UUCMS ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಕುರಿತು ದಿನಾಂಕಗಳನ್ನು ನಿಗದಿ ಪಡಿಸಿ ಅಧಿಸೂಚನೆ ಹೊರಡಿಸಲಾಗಿದೆ.

| ಕ್ರ.ಸಂ. | ವಿವರಗಳು | ದಿನಾಂಕ |
|---|---|---|
| 1. | ವಿದ್ಯಾರ್ಥಿಗಳು ಕಾಲೇಜಿನಲ್ಲಿ ಪರೀಕ್ಷಾ ಶುಲ್ಕದೊಂದಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ (ದಂಡ ರಹಿತ) | 17.09.2022 |
| 2. | ವಿದ್ಯಾರ್ಥಿಗಳು ಕಾಲೇಜಿನಲ್ಲಿ ಪರೀಕ್ಷಾ ಶುಲ್ಕದೊಂದಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ (ದಂಡ ಸಹಿತ ರೂ. 100/–) | 20.09.2022 |
| 3. | ವಿದ್ಯಾರ್ಥಿಗಳು ಕಾಲೇಜಿನಲ್ಲಿ ಪರೀಕ್ಷಾ ಶುಲ್ಕದೊಂದಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ (ದಂಡ ಸಹಿತ ರೂ. 750/–) | 22.09.2022 |
| 4. | ಪ್ರಾಂಶುಪಾಲರುಗಳು ಪರೀಕ್ಷಾ ಶುಲ್ಕ, ದಂಡ ಶುಲ್ಕದೊಂದಿಗೆ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳ ಮಾಹಿತಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ದಿನಾಂಕ | 23.09.2022 |
| 5. | ಪ್ರಾಂಶುಪಾಲರುಗಳು ಪರೀಕ್ಷಾ ಶುಲ್ಕ, ದಂಡ ಶುಲ್ಕದೊಂದಿಗೆ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳ ಮಾಹಿತಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ (ದಂಡ ಸಹಿತ ರೂ.500 ರೊಂದಿಗೆ) ಸಲ್ಲಿಸುವ ದಿನಾಂಕ | 25.09.2022 |
| 6. | ಪರೀಕ್ಷಾ ಪ್ರವೇಶ ಪತ್ರಗಳನ್ನು **(Hall Ticket)** UUCMS ಮೂಲಕ ಪಡೆಯುವ ದಿನಾಂಕ | 25.09.2022 to 28.09.2022 |
| 7. | ಪ್ರಾಯೋಗಿಕ ಪರೀಕ್ಷಾ ದಿನಾಂಕ | 25.10.2022 |
| 8. | ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ | 28.09.2022 |
| 9. | ಆಂತರಿಕ ಅಂಕಗಳನ್ನು ಸಲ್ಲಿಸುವ ದಿನಾಂಕ | 10.09.2022 |

## ಪರೀಕ್ಷಾ ಶುಲ್ಕ, ಅಂಕಪಟ್ಟಿ ಶುಲ್ಕ, ಅರ್ಜಿ ತಪಾಸಣಾ ಶುಲ್ಕ ಹಾಗೂ ಇನ್ನಿತರ ಶುಲ್ಕಗಳ ವಿವರಗಳು

| ಕ್ರ.ಸಂ. | ವಿವರಗಳು | B.A/ B.Com/BBA | B.Sc./BCA |
|---|---|---|---|
| 1. | ದ್ವಿತೀಯ ಸೆಮಿಸ್ಟರ್ ಪರೀಕ್ಷಾ ಶುಲ್ಕ | | |
| | a. ಲಿಖಿತ ಪರೀಕ್ಷಾ ಶುಲ್ಕ | ರೂ.1300.00 | ರೂ. 1400.00 |
| 2. | ಅಂಕಪಟ್ಟಿ ಶುಲ್ಕ | ರೂ. 150.00 | ರೂ. 150.00 |
| 3. | a. ಕಂಪ್ಯೂಟರೀಕರಣ ಶುಲ್ಕ | ರೂ. 140.00 | ರೂ. 140.00 |
| | b. ಅರ್ಜಿ ತಪಾಸಣೆ ಶುಲ್ಕ | ರೂ. 10.00 | ರೂ. 10.00 |
| | **ಒಟ್ಟು ಮೊತ್ತ:** | **ರೂ. 1600.00** | **ರೂ. 1700.00** |

**ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ಪಡೆಯುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಪ್ರವರ್ಗ -1, ಪ್ರವರ್ಗ-2(ಎ), ಪ್ರವರ್ಗ-2(ಬಿ), ಪ್ರವರ್ಗ-3 (ಎ), ಪ್ರವರ್ಗ-3(ಬಿ) ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳ ಖಾತೆಗೆ ಶಿಷ್ಯವೇತನ ಈಗಾಗಲೇ ಜಮಾ ಆದಲ್ಲಿ ಅಂತಹ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕದ ಒಟ್ಟು ಮೊತ್ತದ ಶುಲ್ಕವನ್ನು ಆಯಾ ಕಾಲೇಜಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು ಹಾಗೂ ಪಾವತಿಸಿದ ಪರೀಕ್ಷಾ ಶುಲ್ಕವನ್ನು ಪ್ರಾಂಶುಪಾಲರುಗಳು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ.**

ವಿದ್ಯಾರ್ಥಿಗಳು ಶಿಷ್ಯಾವೇತನಕ್ಕೆ ಅರ್ಜಿ ಸಲ್ಲಿಸಿದಲ್ಲಿ ಮಾತ್ರ ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ಪಡೆಯಬಹುದು. ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ಪಡೆಯುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಪ್ರವರ್ಗ -1, ಪ್ರವರ್ಗ-2(ಎ), ಪ್ರವರ್ಗ-2(ಬಿ), ಪ್ರವರ್ಗ-3(ಎ), ಪ್ರವರ್ಗ3(ಬಿ) ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು ಈ ಕೆಳಕಾಣಿಸಿದ ಶುಲ್ಕ ಭರಿಸತಕ್ಕದ್ದು.

| ಕ್ರ.ಸಂ. | ವಿವರಗಳು | ಪರೀಕ್ಷಾ ಶುಲ್ಕ |
|---|---|---|
| 1 | ಅರ್ಜಿತಪಾಸಣೆ ಶುಲ್ಕ | ರೂ. 10.00 |
| 2 | ಅಂಕಪಟ್ಟಿ ಶುಲ್ಕ | ರೂ. 150.00 |
| 3 | ಕಂಪ್ಯೂಟರೀಕರಣ ಶುಲ್ಕ | ರೂ. 140.00 |
| | **ಒಟ್ಟು ಮೊತ್ತ** | ರೂ. **300.00** |

**ವಿದ್ಯಾರ್ಥಿಗಳಿಗೆ ಸೂಚನೆಗಳು:**

1. ವಿದ್ಯಾರ್ಥಿಯು ಒಮ್ಮೆ ನೋಂದಣಿ ಮಾಡಲು ಮೊಬೈಲ್ ನಂಬರ್ ಹಾಗೂ ಇ-ಮೇಲ್ ನ್ನು ಬೇರೆ ವಿದ್ಯಾರ್ಥಿಗಳು ಬಳಸುವಂತಿಲ್ಲ.
2. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಆನ್‌ಲೈನ್ ಮೂಲಕ ಭರಿಸಿದ ಶುಲ್ಕದ ರಸೀದಿಯೊಂದಿಗೆ/ಚಲನ್‌ದೊಂದಿಗೆ ಪರೀಕ್ಷಾ ಅರ್ಜಿಗಳನ್ನು ಕಾಲೇಜಿನಲ್ಲಿ ಸಲ್ಲಿಸತಕ್ಕದ್ದು.
3. ಪರೀಕ್ಷಾ ಕೇಂದ್ರದ ಬದಲಾವಣೆಗೆ ಯಾವುದೇ ಕಾರಣಕ್ಕೂ ಅವಕಾಶವಿರುವುದಿಲ್ಲ.
4. **ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಪ್ರವರ್ಗ -1, ಪ್ರವರ್ಗ-2 (ಎ), ಪ್ರವರ್ಗ-2(ಬಿ), ಪ್ರವರ್ಗ-3 (ಎ), ಪ್ರವರ್ಗ-3(ಬಿ) ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು, ಸರ್ಕಾರ ನಿಗಧಿಪಡಿಸಿದ ಆದಾಯದ ಮಿತಿಯೊಳಗೆ ಇದ್ದಲ್ಲಿ ಹಾಗೂ ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸಿದಲ್ಲಿ ಮಾತ್ರ ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ಪಡೆಯಬಹುದು.**
5. ಒಮ್ಮೆ ಪಾವತಿಸಲಾದ ಪರೀಕ್ಷಾ ಶುಲ್ಕವನ್ನು ಯಾವ ಕಾರಣಕ್ಕೂ ಮರುಪಾವತಿ ಮಾಡಲಾಗುವುದಿಲ್ಲ ಹಾಗೂ ಅದನ್ನು ಮುಂದಿನ ಪರೀಕ್ಷೆಗಳಿಗೆ ಸರಿದೂಗಿಸಿ ಕೊಳ್ಳಲಾಗುವುದಿಲ್ಲ ಮತ್ತು ಇಂತಹ ವಿಷಯಗಳಿಗೆ ಪತ್ರ ವ್ಯವಹಾರಕ್ಕೆ ಆಸ್ಪದವಿರುವುದಿಲ್ಲ.
6. ಯಾವುದೇ ಪರಿಸ್ಥಿತಿಯಲ್ಲಿ ಅಧಿಸೂಚನೆಯಲ್ಲಿ ನಿಗಧಿಪಡಿಸಿ ತಿಳಿಸಿದ ಕೊನೆಯ ದಿನಾಂಕ ಮುಗಿದ ನಂತರ ಬಂದಂತಹ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಯಾವುದೇ ಕಾರಣಕ್ಕಾಗಿ ಪರೀಕ್ಷೆಗಳು ಮುಂದೂಡಿದಲ್ಲಿ ಶುಲ್ಕ ಪಾವತಿಸುವ ದಿನಾಂಕಗಳು ಬದಲಾವಣೆಯಾಗುವುದಿಲ್ಲ.

**ಪ್ರಾಂಶುಪಾಲರುಗಳಿಗೆ ಸೂಚನೆಗಳು:**

1) ಸೆಪ್ಟೆಂಬರ್/ಅಕ್ಟೋಬರ್-2022 ರ ಪರೀಕ್ಷಾ ಅರ್ಜಿಗಳನ್ನು ಆನ್‌ಲೈನ್ ಮೂಲಕ ಪಡೆಯಬಹುದಾಗಿದ್ದು, ಹಾಗೂ ಸದರಿ ಚಲನ್‌ಗಳನ್ನು ವಿದ್ಯಾರ್ಥಿಗಳ ಪಟ್ಟಿಯೊಂದಿಗೆ ಪರೀಕ್ಷಾ ವಿಭಾಗಕ್ಕೆ ಸಲ್ಲಿಸಬೇಕು. ಯಾವುದೇ ಕಾರಣಕ್ಕೂ ಪರೀಕ್ಷಾ ವಿಭಾಗದಿಂದ ಮ್ಯಾನುವಲ್ ಪರಿಕ್ಷಾ ಅರ್ಜಿಗಳನ್ನು ನೀಡುವುದಿಲ್ಲ.

2) ಪ್ರಾಂಶುಪಾಲರುಗಳು ಆನ್‌ಲೈನ ಮೂಲಕ ಭರಿಸಿದ ಶುಲ್ಕದ ರಸೀದಿಯೊಂದಿಗೆ/ಚಲನ್‌ದೊಂದಿಗೆ ಪರೀಕ್ಷಾ ಅರ್ಜಿಗಳ ಮಾಹಿತಿ (ವಿದ್ಯಾರ್ಥಿಗಳ ಪಟ್ಟಿ)ಯನ್ನು ಪರೀಕ್ಷಾ ವಿಭಾಗಕ್ಕೆ 25.09.2022 ರೊಳಗಾಗಿ ಸಲ್ಲಿಸತಕ್ಕದು. ತಪ್ಪಿದಲ್ಲಿ ಪ್ರತಿ ದಿನ ರೂ. 500/- ದಂಡ ವಿಧಿಸಲಾಗುವುದು.

3) ಬಿ.ಎ/ಬಿ.ಎಸ್ಸಿ/ಬಿ.ಕಾಂ/ಬಿ.ಬಿ.ಎ/ಬಿ.ಸಿ.ಎ ಸೆಮಿಸ್ಟರ್ ಪರೀಕ್ಷೆಗಳಿಗೆ ಹಾಜರಾಗುವ ವಿಷಯವಾರು ಅಭ್ಯರ್ಥಿಗಳ ಸಂಖ್ಯೆ ತೋರಿಸುವ ಪಟ್ಟಿಯನ್ನು ಲಗತ್ತಿಸಬೇಕು.

4) ಅಂಕಪಟ್ಟಿಗಳ ಪ್ರತಿಗಳನ್ನು ಆಯಾ ಮಹಾವಿದ್ಯಾಲಯ ಪ್ರಾಂಶುಪಾಲರೇ ದೃಢೀಕರಿಸಬೇಕು. ವಿನಾಯತಿ (**Exemption**) ಪಡೆಯುವ ಬಗ್ಗೆ ದೃಢೀಕರಿಸಲ್ಪಟ್ಟ ಝರಾಕ್ಸ್ ಪ್ರತಿಗಳನ್ನು ಲಗತ್ತಿಸಬೇಕು.

5) ಪ್ರಾಂಶುಪಾಲರುಗಳು ವಿಶ್ವವಿದ್ಯಾಲಯಕ್ಕೆ ಪರೀಕ್ಷಾ ಅರ್ಜಿಗಳ ಮಾಹಿತಿಯನ್ನು ಕಳುಹಿಸುವ ಮೊದಲು ಅವುಗಳನ್ನು ಕೂಲಂಕುಶವಾಗಿ ಪರಿಶೀಲಿಸಬೇಕು.

**6) ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ಪಡೆಯುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಪ್ರವರ್ಗ -1, ಪ್ರವರ್ಗ-2(ಎ), ಪ್ರವರ್ಗ-2(ಬಿ), ಪ್ರವರ್ಗ-3 (ಎ), ಪ್ರವರ್ಗ-3(ಬಿ) ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು ಅರ್ಜಿ ತಪಾಸಣೆ**

**ಶುಲ್ಕ ರೂ. 10/–, ಪರೀಕ್ಷಾ ಕಂಪ್ಯೂಟರೀಕರಣ ಶುಲ್ಕ ರೂ. 140/–, ಅಂಕಪಟ್ಟಿ ಶುಲ್ಕ ರೂ.150/– ಒಟ್ಟು ರೂ. 300/– ಪಾವತಿ ಮಾಡಬೇಕಾಗುತ್ತದೆ.**

7) **ಪ್ರಾಂಶುಪಾಲರುಗಳು ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ಪಡೆಯುವ ವಿದ್ಯಾರ್ಥಿಗಳ ಶಿಷ್ಯವೇತನ ಅರ್ಜಿಗಳನ್ನು ಕಡ್ಡಾಯವಾಗಿ ಸಂಬಂಧಪಟ್ಟ ಇಲಾಖೆಗಳಿಗೆ ಸಲ್ಲಿಸುವ ವ್ಯವಸ್ಥೆ ಮಾಡುವುದು. ಪ್ರಾಂಶುಪಾಲರುಗಳು ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಸಮಾಜ ಕಲ್ಯಾಣ ಇಲಾಖೆಯಿಂದ / ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ಇಲಾಖೆಯಿಂದ ಪಡೆದು ವಿಶ್ವವಿದ್ಯಾಲಯಕ್ಕೆ ಸಂದಾಯ ಮಾಡುವ ಜವಾಬ್ದಾರಿ ಆಯಾ ಮಹಾವಿದ್ಯಾಲಯದ ಪ್ರಾಂಶುಪಾಲರ ಹೊಣೆಯಾಗಿರುವುದು.**

8) ಶುಲ್ಕ ವಿನಾಯತಿ ಪಡೆಯವ ವಿದ್ಯಾರ್ಥಿಗಳ ವಿವರ ಪಟ್ಟಿಯ ಒಂದು ಪ್ರತಿಯನ್ನು ಹಣಕಾಸು ಅಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು ಇವರಿಗೆ ಹಾಗೂ ಮತ್ತೊಂದು ಪ್ರತಿಯನ್ನು ಪರೀಕ್ಷಾ ವಿಭಾಗಕ್ಕೆ ಸಲ್ಲಿಸಬೇಕು. ಶುಲ್ಕ ವಿನಾಯಿತಿ ಪಡೆಯುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಜಾತಿ ಪ್ರಮಾಣ ಪತ್ರವನ್ನು ಆಯಾ ತಹಶೀಲ್ದಾರರಿಂದ ಪಡೆದು ಪರೀಕ್ಷಾ ಅರ್ಜಿಯ ಮಾಹಿತಿಯ ಪಟ್ಟಿ ಜೊತೆಗೆ ಲಗತ್ತಿಸತಕ್ಕದ್ದು.

9) ಕಾಲೇಜಿನ ಪ್ರಾಂಶುಪಾಲರುಗಳು ವಿದ್ಯಾರ್ಥಿಗಳಿಂದ ಅರ್ಜಿ ತಪಾಸಣೆ ಶುಲ್ಕ ರೂ. 10/– ಅನ್ನು ಪಾವತಿಕೊಳ್ಳತಕ್ಕದ್ದು.

10) ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ತಮ್ಮ ಉತ್ತರಗಳನ್ನು ಕೇವಲ ಇಂಗ್ಲೀಷ್ ಇಲ್ಲವೆ ಕನ್ನಡ ಮಾಧ್ಯಮದಲ್ಲಿ ಮಾತ್ರ ಬರೆಯಲು ಅವಕಾಶವಿದೆ. ಉಳಿದ ಭಾಷೆಗಳಲ್ಲಿ ಬರೆಯತಕ್ಕದ್ದಲ್ಲ ಎಂಬುದನ್ನು ಪ್ರಾಂಶುಪಾಲರು ವಿದ್ಯಾರ್ಥಿಗಳ ಗಮನಕ್ಕೆ ತರಬೇಕು. ವಿದ್ಯಾರ್ಥಿಗಳು ಇಂಗ್ಲೀಷ್ ಇಲ್ಲವೆ ಕನ್ನಡ ಮಾಧ್ಯಮದಲ್ಲಿ ಬರೆಯದೇ ಬೇರೆ ಮಾಧ್ಯಮದಲ್ಲಿ ಬರೆದರೆ ಅಂತಹ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳು ಮೌಲ್ಯಮಾಪನವಾಗದೇ ಉಳಿಯುತ್ತವೆ. ಅಂತಹ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶವನ್ನು ಅನೂರ್ಜಿತಗೊಳಿಸಲಾಗುವುದೆಂದು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡಬೇಕು. ಇದು ಭಾಷಾ ವಿಷಯಗಳಿಗೆ ಅನ್ವಯವಾಗುವುದಿಲ್ಲ.

11) ಪ್ರಾಂಶುಪಾಲರು ತಮ್ಮ ಕಛೇರಿಯ ಸಿಬ್ಬಂದಿಗಳಿಗೆ ಈ ಅಧಿಸೂಚನೆಯಲ್ಲಿ ತಿಳಿಸಿದ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವ ಹೊಣೆಗಾರಿಗೆ ಅವರದ್ದಾಗಿದೆ ಎಂಬುದು ಮನವರಿಕೆ ಮಾಡಿಕೊಡಲು ಸೂಚಿಸಲಾಗಿದೆ.

12) ಪ್ರಾಂಶುಪಾಲರುಗಳು ಈ ಕೆಳಗೆ ನಮೂದಿಸಿದ ನಮೂನೆಯಲ್ಲಿ ವಿದ್ಯಾರ್ಥಿಗಳ ಮಾಹಿತಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು.

## All UG Courses: BA/BCOM/BSC/BBA/BCA

| College Name: | | | | | | | |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| Sl.No. | Name of the Student | Register No. | Category | Demand | Collection | Balance | Remarks |
| | | | | | | | |

(ಪ್ರೊ. ಯರಿಸ್ವಾಮಿ ಎಂ.)
ಕುಲಸಚಿವರು (ಮೌಲ್ಯಮಾಪನ)
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

**ಗೆ,**

ರಾಯಚೂರು ವಿಶ್ವವಿದ್ಯಾಲಯ ವ್ಯಾಪ್ತಿಯ ಸಂಲಗ್ನತೆ ಹೊಂದಿದ ಎಲ್ಲಾ ಪದವಿ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ, ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

**ಪ್ರತಿಗಳು:**

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರು ಅವರ ಆಪ್ತ ಸಹಾಯಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
2. ಜಿಲ್ಲಾ ಸಮಾಜಕಲ್ಯಾಣ/ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆಗಳಿಗೆ
3. ಹಣಕಾಸು ಅಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
4. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
5. ಶೈಕ್ಷಣಿಕ ವಿಭಾಗ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
6. ಕಛೇರಿ ಪ್ರತಿ.